**ಎರಡನೇ ಅಪರ ಸಿವಿಲ್ ನ್ಯಾಯಾಲಯ ಮತ್ತು**
**ಜೆ.ಎಂ.ಎಫ್.ಸಿ. ಕನಕಪುರ.**

CC No.622/2021

CW -8 PW -5

| | | |
|---|---|---|
| ಹೆಸರು | ಃ | ಕೃಷ್ಣ ಅಲಿಯಾಸ್ ಕೃಷ್ಣಪ್ಪ |
| ತಂದೆಯ ಹೆಸರು | ಃ | ವೀರೇಗೌಡ |
| ವಯಸ್ಸು | ಃ | 58 ವರ್ಷ |
| ಉದ್ಯೋಗ | ಃ | ಸೆಕ್ರೆಟರಿ |
| ವಾಸ | ಃ | ಕನಕಪುರ |

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ ದಿನಾಂಕ 04.06.2024

ನ್ಯಾಯಾಲಯ ಮುಂದಿರುವ ಆರೋಪಿತರು ಗೊತ್ತು. ಚಾಸಾ-1 ರಿಂದ 7, 9 ರಿಂದ 11 ಗೊತ್ತು.

2018 ರಿಂದ ಇಲ್ಲಿಯವರೆಗೂ ಅಳ್ಳಿಮಾರನಹಳ್ಳಿ ಗ್ರಾಮ ಪಂಚಾಯಿತಿಯ ಸೆಕ್ರಟರಿ ಆಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 25.10.2020 ರಂದು ಚಾಸಾ-2 ಮತ್ತು 1 ನೇ ಆರೋಪಿಗೆ ವಿವಾಹ ವಾಗಿದ್ದು, ಚಾಸಾ-2 ಅಪ್ರಾಪ್ತ ವಯಸ್ಕರಾಗಿರುವ ಕಾರಣ ಮಕ್ಕಳ ಕಲ್ಯಾಣ ಸಹಾಯವಾಣಿಗೆ ಮಾಹಿತಿ ಬಂದಿದ್ದು, ದಿನಾಂಕ 09.11.2020 ರಂದು ನನಗೆ ಮಕ್ಕಳ ಸಹಾಯವಾಣಿ ಸಿಬ್ಬಂದಿಗಳು ಸ್ಥಳಕ್ಕೆ ಹೋಗಬೇಕಾಗಿದೆ ಎಂದು ಹಾಗೂ ತಾವು ಅಳ್ಳಿಮಾರನಹಳ್ಳಿಗೆ ಬರುತ್ತಿರುವುದಾಗಿ ವಿಷಯ ತಿಳಿಸಿದರು. ನಂತರ ನಾನು, ಪೋಲಿಸ್ ಅಧಿಕಾರಿಗಳು ಮತ್ತು ಪಿಡಿಓ ರವರಿಗೆ ವಿಚಾರ ತಿಳಿಸಿ, ಅದಾದ ನಂತರ

ಚಾಸಾ-1, 9, 10 ,11 ಮತ್ತು 13 ರವರು ಸ್ಥಳಕ್ಕೆ ಹೋದೆವು. ಚಾಸಾ-2 ರವರ ಮನೆಗೆ ಹೋಗಿ ವಿಚಾರಿಸಿದಾಗ ಅವರು ಮದುವೆ ಆಗಿಲ್ಲ ಅವರು 1 ನೇ ಆರೋಪಿಯನ್ನು ಕೇವಲ ಪ್ರೀತಿಸುತ್ತಿದ್ದಾರೆ ಎಂದು ತಿಳಿಸಿದರು. ನಂತರ ಮಕ್ಕಳ ಸಹಾಯವಾಣಿಯವರು ಹಿಂದಿನ ದಿನ ಪಡೆದ ಮಾಹಿತಿ ಮತ್ತು ಪೋಟೋಗಳ ಮೇರೆಗೆ ಚಾಸಾ-2 ಮತ್ತು 3 ನೇ ಆರೋಪಿಯನ್ನು ವಿಚಾರಿಸಲಾಗಿ ಅವರು ಆ ಬಗ್ಗೆ ಏನು ಉತ್ತರಿಸದ ಕಾರಣ, ಅವರಿಗೆ 18 ವರ್ಷಗಳ ಕೆಳಗಿನ ಮಕ್ಕಳಿಗೆ ವಿವಾಹ ಮಾಡಬಾರದು ಎಂದು ವಿಷಯ ತಿಳಿಸಿದೆವು, ಆದರೆ ಅವರು ಒಪ್ಪದ ಕಾರಣ ಅವರ ವಿರುದ್ಧ ಪ್ರಕರಣ ದಾಖಲಿಸಿದೆವು.

ಮಕ್ಕಳ ಸಹಾಯವಾಣಿಯವರು ದಿನಾಂಕ 25.10.2020 ರಂದು ಮುತ್ತತ್ತರಾಯಸ್ವಾಮಿ ದೇವಸ್ಥಾನದಲ್ಲಿ ವಿವಾಹವಾಗಿದೆ ಎಂದು ಮಾಹಿತಿಯನ್ನು ಸಂಗ್ರಹಿಸಿದ ಮೇರೆಗೆ ಪ್ರಕರಣ ದಾಖಲಿಸಿದೆವು. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ.

<u>ಪಾಟೀ ಸವಾಲು : ಆರೋಪಿತರ ಪರ ಶ್ರೀ. ಹೆಚ್. ಎಸ್.ಎನ್. ವಕೀಲರಿಂದಃ</u>

ಬಾಚಳ್ಳಿ ದೊಡ್ಡಿ ಗ್ರಾಮ ನಮ್ಮ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದೆ ಎಂದರೆ ಸರಿ. ನನಗೆ ಆರೋಪಿತರ ಪರಿಚಯವಿದೆ. ಬಾಲಕಿಯ ಮನೆಯ ಹತ್ತಿರ ಹೋಗಿ ವಿಚಾರಣೆ ಮಾಡಲು ನನಗೆ ಮೌಖಿಕ ನಿರ್ದೇಶನ ದೊರಕಿತ್ತು. ಸ್ಥಳದಲ್ಲಿ ಬಾಲಕಿ ಮತ್ತು ಅವಳ ತಂದೆ ತಾಯಿ ಮಾತ್ರ ಇದ್ದರು. ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯಿಂದ ಹೊರತು ಪಡಿಸಿ ಚಾಸಾ-2 ರವರ ಬಾಲ್ಯ ವಿವಾಹವಾದ ಬಗ್ಗೆ ನನಗೆ ಗ್ರಾಮಸ್ಥರಿಂದ

ಯಾವುದೇ ಮಾಹಿತಿ ದೊರೆತಿಲ್ಲ. ನಾವು ಚಾಸಾ-2 ರವರ ತಂದೆ ತಾಯಿಯನ್ನು ವಿಚಾರಿಸಿದಾಗ ಅವರು ಚಾಸಾ-2 ರವರು 1 ನೇ ಆರೋಪಿಯನ್ನು ಪ್ರೀತಿಸುತ್ತಿದ್ದಾರೆ ಆದರೆ ಮದುವೆಯಾಗಿಲ್ಲ ಎಂದು ಮಾಹಿತಿಯನ್ನು ನೀಡಿದರು. ನಾವು ಆ ಬಗ್ಗೆ ಚಾಸಾ-2 ರವರ ಮನೆಯ ಅಕ್ಕ ಪಕ್ಕದವರನ್ನು ವಿಚಾರಿಸಿದಾಗ ಅವರಿಂದ ನಮಗೆ ಯಾವುದೇ ಮಾಹಿತಿ ದೊರೆಯಲಿಲ್ಲ. ಆರೋಪಿ ಮತ್ತು ಚಾಸಾ-2 ರವರು ಲಂಬಾಣಿ ಜನಾಂಗಕ್ಕೆ ಸೇರಿದವರು. ಮಕ್ಕಳ ಕಲ್ಯಾಣ ಸಮಿತಿಯವರು ತೋರಿಸಿರುವ ಪೋಟೋವನ್ನು ನಾನು ಸ್ಥಳದಲ್ಲಿ ನೋಡಿರುತ್ತೇನೆ. ದೋಷಾರೋಪಣ ಪಟ್ಟಿಯೊಂದಿಗೆ ನೀಡಿದ ಪೋಟೋವನ್ನು ಸಾಕ್ಷಿ ಗೆ ತೋರಿಸಲಾಗಿ ಸದರಿ ಪೋಟೋದಲ್ಲಿ 1 ನೇ ಆರೋಪಿ ಚಾಸಾ-2 ರವರಿಗೆ ತಾಳಿ ಕಟ್ಟುತ್ತಿರುವ ಯಾವುದೇ ಚಿತ್ರಣವಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಲಂಬಾಣಿ ಜನಾಂಗದವರು ಅವರದೇ ಆದ ಉಡುಗೆ ತೊಡುಗೆ ಹಾಗೂ ಒಡವೆ ವಸ್ತ್ರಗಳನ್ನು ಹಾಕಿ ಕೊಳ್ಳುತ್ತಾರೆ ಎಂದರೆ ಸರಿ. 1 ನೇ ಆರೋಪಿ ಚಾಸಾ-2 ರವರನ್ನು ಮದುವೆ ಯಾಗಿಲ್ಲ, ಆ ಬಗ್ಗೆ ಗ್ರಾಮಸ್ಥರಿಂದ ಯಾವುದೇ ಮಾಹಿತಿ ಬರದಿದ್ದರೂ ಸಹ, ನಾನು ಮಕ್ಕಳ ಕಲ್ಯಾಣ ಸಮಿತಿಯವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಯಾವುದೇ ಮದುವೆ ಯಾಗಿಲ್ಲದಿದ್ದರೂ ಸಹ ಅಂಕಿ ಅಂಶಗಳಿಗೋಸ್ಕರ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಕಂಪ್ಯೂಟರ್ ಎಡಿಟೆಡ್ ಪೋಟೋವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲಾಗಿದೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ : ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ, ಕನಕಪುರ**